ಶಾಲೆಗಿಂತ ಮೊದಲು ಬೆಳಗ್ಗೆ ಒಂದು ಗಂಟೆ ಅವಳು ಮದರಸಕ್ಕೆ ಹೋಗಬೇಕಿತ್ತು. ಅಲ್ಲಿ ಅರಬಿ ಭಾಷೆಯಲ್ಲಿ ಶಿಕ್ಷಣ. ಅರಬಿ ಭಾಷೆ ಕಷ್ಟವೆಂದು ಮಲಯಾಳದಲ್ಲಿ ಅದರ ಅರ್ಥ ಹೇಳುತ್ತಿದ್ದರು. ಅವಳಿಗೆ ಅದು ಏನೇನೂ ಇಷ್ಟವಾಗುತ್ತಿರಲಿಲ್ಲ. ಅಲಿಮಾಳಿಗೆ ಆಗ ಕುಟ್ಟನ ನೆನಪಾಗುತ್ತಿತ್ತು. ಅದೀಗ ತನ್ನನ್ನು ಕಾಣದೆ 'ಮೇss' ಎಂದು ಅರಚುತ್ತಿರಬಹುದು. ಅಕ್ಕ ನುಸ್ರುತ್ ಕುಟ್ಟನಿಗೆ ಹುಲ್ಲು ಹಾಕ್ತಾಳಾ? ಅಕ್ಕಚ್ಚು ಕುಡಿಯಲಿಕ್ಕೆ ಕೊಡುತ್ತಾಳಾ? ಅಲ್ಲ ಹುಣಸೆ ಅಡರು ತೆಗೆದುಕೊಂಡು ರಪ ರಪ ಬಾರಿಸ್ತಾಳಾ? ಅಕ್ಕ ನುಸ್ರುತ್‌ಗೆ ಬೇಗ ಸಿಟ್ಟು ಬರುತ್ತದೆ. ಆಗ ಒಮ್ಮೊಮ್ಮೆ ಅಲಿಮಾಳಿಗೂ ಹುಣಸೆ ಅಡರಿನಿಂದ ಕಾಲಿಗೆ ಪೆಟ್ಟು ಬೀಳುತ್ತಿತ್ತು. ತನಗೇ ಸಹಿಸಲು ಕಷ್ಟವಾಗುವ ಆ ಏಟುಗಳನ್ನು ಕುಟ್ಟ ಹೇಗೆ ಸಹಿಸಿಯಾನೋ ಎಂದು ಅವಳು ವ್ಯಾಕುಲ ಚಿತ್ತಳಾಗುತ್ತಿದ್ದಳು.

ಅವಳು ಕುಟ್ಟನನ್ನು ತನ್ನ ಚಾಪೆಯಲ್ಲೇ ಮಲಗಿಸಿಕೊಳ್ಳುತ್ತಿದ್ದಳು. ಒಂದು ಸಲ ಅದು ಅವಳ ಹೊದಿಕೆ ಮೇಲೆಯೇ ವನ್ ಮಾಡಿಬಿಟ್ಟಿತು. ವನ್ ತಾಗಿ ಅವಳಿಗೆ ಎಚ್ಚರವಾಗಿ ನೋಡಿದರೆ ಕುಟ್ಟ ಚಾಪೆಯಿಂದ ಹೊರಗೆ ಮಲಗಿತ್ತು! "ಕಳ್ಳಾ, ನನ್ನನ್ನು ಒದ್ದೆ ಮಾಡಿ ನೀನು ಹೊರಗೆ ಮಲಗಿದ್ದೀಯಾ?" ಎಂದು ಅದರ ಕಿವಿಯನ್ನು ಬಲವಾಗಿ ಹಿಂಡಿದಾಗ ಅದು 'ಮೇss' ಎಂದು ಅರಚಿತ್ತು. ಅವಳು ಮರುಗಿ ಅದನ್ನು ತಬ್ಬಿಕೊಂಡು, ''ಇನ್ನು ಮುಂದೆ ನೀನು ವನ್ನ್ ಬಂದಾಗ ಚಾಪೆಯಿಂದ ಹೊರಗೆ ಹೋಗಿ ಮಾಡಬೇಕು. ನೀನು ಜಾಣ ಮರಿಯಲ್ವಾ?" ಎಂದು ಅದನ್ನು ರಮಿಸಿದಳು. ಅದು ಅರ್ಥವಾಯಿತೆಂಬಂತೆ ತಲೆಯನ್ನು ಕೊಡಹಿ ಸಣ್ಣಸ್ವರದಲ್ಲಿ 'ಮೇss' ಎಂದಿತು. "ಮೇ ಅಲ್ಲ, ಜೂನ್" ಎಂದು ಅಲಿಮಾ ಪರಿಹಾಸ್ಯ ಮಾಡಿದಳು.

ಆಮೇಲೆ ಎಂದೂ ಅದು ಅವಳ ಚಾಪೆಯಲ್ಲಿ ವನ್ ಮಾಡಲಿಲ್ಲ. ಆದರೆ, ಚಾಪೆಯ ಹತ್ತಿರವೇ ಟೂ ಮಾಡಿಬಿಡುತ್ತಿತ್ತು. ದೊಡ್ಡ ಕಡಲೇಕಾಯಿ ಗಾತ್ರದ ಬಿಡಿ ಬಿಡಿ ಟೂ ಅಸಹ್ಯವಾಗಿರುತ್ತಿರಲಿಲ್ಲ. ಅದು ಗರಿ ಗರಿಯಾಗಿದ್ದುದರಿಂದ ಕೈ ಕಾಲುಗಳಿಗೆ ಅಂಟಿಕೊಳ್ಳುತ್ತಿರಲಿಲ್ಲ. ಅವಳ ಚಾಪೆಯಲ್ಲಿ ಕುಟ್ಟನ ಟೂ ಕಂಡಾಗ ಭಾವ ನಾಜಿರ್ "ಮೋಳೆ, ನಿನ್ನ ಛಾನ್ಸು. ಇಂದು ಕಡ್ಲೆ ಮಿಠಾಯಿ ತುಂಬಾ ಇದೆ. ಚೀಲದಲ್ಲಿ ಹಾಕಿಕೊಂಡು ಹೋಗಿ ನಿನ್ನ ಸ್ನೇಹಿತೆಯರಿಗೂ ಕೊಡು" ಎಂದು ಪರಿಹಾಸ್ಯ ಮಾಡುತ್ತಿದ್ದರು. ನಾಜಿರ್ ಎಂದೂ ಅಲಿಮಾಳಿಗೆ ಹೊಡೆದವನಲ್ಲ. ಅಕ್ಕ ನುಸ್ರುತ್ ಅವಳಿಗೆ ಹೊಡೆಯ ಬಂದಾಗ ಅಡ್ಡ ನಿಲ್ಲುವವನು, ಭಾವನೆಂದರೆ ಅಲಿಮಾಳಿಗೆ ಅಕ್ಕನ ಮೇಲಿರುವುದಕ್ಕಿಂತಲೂ ಹೆಚ್ಚು ಪ್ರೀತಿ.

ಅಲಿಮಾಳಿಗೆ ಭಾವ ನಾಜಿರ್ ಕುಟ್ಟನನ್ನು ತಂದುಕೊಟ್ಟದ್ದು ಒಂದು ವಿಶಿಷ್ಟ ಸನ್ನಿವೇಶದಲ್ಲಿ. ಅವಳ ಅಣ್ಣ ಜೈನುದ್ದೀನ್ ಇದ್ದಕ್ಕಿದ್ದಂತೆ ಮನೆ ಬಿಟ್ಟು ಹೋದವನು ಮರಳಿ ಬರಲೇ ಇಲ್ಲ. ಅವ ಮುಂಬಯಿಯಲ್ಲಿ ಭೂಗತಲೋಕದಲ್ಲಿ ಇದ್ದಾನೆಂದು ಒಂದು ಸುದ್ದಿ ಹರಡಿದ್ದರೆ, ಕರಾಚಿಗೆ ಹೋಗಿ ಪಾತಕಿಗಳ ಗುಂಡೇಟಿಗೆ ಬಲಿಯಾಗಿದ್ದಾನೆಂದು ಇನ್ನೊಂದು ಸುದ್ದಿ ಹರಡಿತ್ತು. ಅಲಿಮಾ ಒಂದಷ್ಟು ದಿನಗಳ ಕಾಲ ಕಣ್ಣೀರು ಹಾಕಿದಳು. ಅವಳ ತಾಯಿ ನುಸೈಬಾ ಮಗಳಿಗೆ ಕಾಣದಂತೆ ಕಣ್ಣೀರು ಹಾಕಿಕೊಂಡೇ ನಮಾಜು ಮಾಡುತ್ತಿದ್ದಳು. ತಂದೆ ಹಮೀದ್ ಮಾತ್ರ, "ಅವ ಇನ್ನು ಬರುವುದಿಲ್ಲ. ಬಂದರೂ ಪೋಲಿ ಬಿದ್ದು ಊರು ಬಿಟ್ಟವನನ್ನು ನಾನು ಮನೆಗೆ ಸೇರಿಸುವುದಿಲ್ಲ" ಎಂದಿದ್ದರು. ಅಣ್ಣ ಹಾಗೆ ಓಡಿ ಹೋದ ಮೇಲೆಯೇ ಅಕ್ಕ ನುಸ್ರುತ್‌ನ ಮದುವೆ ನಾಜಿರ್‌ನೊಟ್ಟಿಗೆ ನಡೆದದ್ದು. ಅಣ್ಣನ ನೆನಪಾಗಿ ಅಲಿಮಾ ಕಣ್ಣೀರು ಮಿಡಿದರೆ ಭಾವ ನಾಜಿರ್ ಸಂತೈಸುತ್ತಿದ್ದ. "ಅವ ಹೋದರೇನಂತೆ? ನಾನಿಲ್ಲವಾ? ನೀನು ಚಿನ್ನಾರಮೋಳು. ನಾನೀಗ ಟಿಂಬರ್ ಬಿಸಿನೆಸ್‌ಗೆ ಕೈ ಹಾಕಿದ್ದೇನೆ. ನಿನ್ನ ನಸೀಬು ಚೆನ್ನಾಗಿದ್ದರೆ ನಿನಗೆ ಬಂಗಾರದ ಚೈನು ಮಾಡಿಸಿ ಹಾಕ್ತೇನೆ. ಮನೆಗೆ ಟಿ.ವಿ. ತರ್ತೇನೆ. ನಿನಗೇ ಒಂದು ಮೊಬೈಲು ತಂದುಕೊಡ್ತೇನೆ" ಎಂದು ಅವಳ ಕಣ್ಣೀರು ತಡೆದು ಮೇಲಕ್ಕೆತ್ತಿ ಗುಳಿಬೀಳುವ ಅವಳ ಕೆನ್ನೆಗೆ ಲೊಚಕ್ಕನೆ ಮುತ್ತಿಕ್ಕುತ್ತಿದ್ದ. ಅವನ ಪ್ರೀತಿಯಲ್ಲಿ ಅಣ್ಣ ಮರೆತೆ ಹೋಗುತ್ತಿದ್ದ.